ಓ ಎಸ್ ನಂ. 41/2016
ಡಿ ಡಬ್ಲ್ಯು 2
ದಿನಾಂಕ 24/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಡಿ ಸಿ ವಕೀಲರಿಂದಃ

ಪ್ರಸ್ತುತ ದಾವೆಯನ್ನು ಯಾರು ಯಾವ ಉದ್ದೇಶಕ್ಕಾಗಿ ಹೂಡಿರುತ್ತಾರೆಂದು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ವೀರಣ್ಣಗುಪ್ತ ನನ್ನ ತಂದೆ ಎಂದರೆ ಸರಿ. 4 ನೇ ಪ್ರತಿವಾದಿ ನಿತೀನ್ ನನ್ನ ಅಣ್ಣನಾದ ಕೆ ವಿ ಶಾಂತಕುಮಾರ್ ರವರ ಮಗ ಎಂದರೆ ಸರಿ. ನಾನು ಪ್ರಥಮ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಗಳು ಏನು ಪರಿಹಾರ ಕೋರಿ ದಾವೆ ಹೂಡಿರುತ್ತಾರೆಂದು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನನ್ನ ಪರವಾಗಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನನ್ನ ಪ್ರತಿವಾದ ಪತ್ರದ ಪ್ಯಾರಾ ನಂ.11 ರಲ್ಲಿ ಪ್ರತಿವಾದಿಗಳು ಅಸೆಸ್ಮೆಂಟ್ ನಂ. 1977/3 ಮತ್ತು 1914/3 ರಲ್ಲಿ 272+198/2*280 ವಿಸ್ತೀರ್ಣದ ಸ್ವತ್ತಿಗೆ ಪ್ರತಿವಾದಿಗಳೇ ಮಾಲೀಕರು ಎಂದು

ಬರೆಸಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತನ್ನು ಯಾವಾಗ ಕೊಂಡುಕೊಂಡಿರುತ್ತೇವೆ ಎಂದರೆ ಸಾಕ್ಷಿ ದಾವಾ ಸ್ವತ್ತಿನ ಸಂಖ್ಯೆ 1977/1 ಆಗಿದ್ದು ಅದನ್ನು ನಾವು ಕೊಂಡುಕೊಂಡಿಲ್ಲ ನಾವು ಕೊಂಡುಕೊಂಡಿರುವ ಸ್ವತ್ತು 1977/3 ಎಂದು ನುಡಿಯುತ್ತಾರೆ. ನಾವು ಪ್ಯಾರಾ ನಂ.11 ರಲ್ಲಿ ಹೇಳಿರುವಂತೆ 1977/3 ಮತ್ತು 1914/3 ರ ಸ್ವತ್ತುಗಳನ್ನು ಯಾರಿಂದ ಕೊಂಡುಕೊಂಡಿರುತ್ತೇವೆ ಎಂದರೆ ಸಾಕ್ಷಿ ಎಲ್ ಸಿ ರವೀಂದ್ರಕುಮಾರ್ ರವರಿಂದ ಎಂದು ನುಡಿಯುತ್ತಾರೆ. ನಾವು ಕೊಂಡುಕೊಂಡಿರುವ ಸ್ವತ್ತುಗಳು ಸದರಿ ಎಲ್ ಸಿ ರವೀಂದ್ರಕುಮಾರ್ ರವರಿಗೆ ಯಾವ ರೀತಿ ಬಂತು ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಂತಹ ಯಾವ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲಾತಿಗಳನ್ನು ಪರಿಶೀಲಿಸಿ ಸದರಿ ಸ್ವತ್ತನ್ನು ಎಲ್ ಸಿ ರವೀಂದ್ರಕುಮಾರ್ ರವರು ಜಿ ಡಿ ಚಾವ್ಡರವರಿಂದ ಖರೀದಿಸಿರುತ್ತಾರೆ, ಆದರೆ ನಾನು ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಎಲ್ ಸಿ ರವೀಂದ್ರಕುಮಾರ್ ರವರಿಂದ ಆಸ್ತಿಗಳನ್ನು ಖರೀದಿಸುವಾಗ ಯಾವ ಯಾವ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ ಎಂದರೆ ಸಾಕ್ಷಿ ಅಸೆಸ್ಮೆಂಟ್ ಸಂಖ್ಯೆ 1977/3 ಮತ್ತು 1914/3 ಕ್ಕೆ ಲಗತ್ತಾಗಿ ಇ ಸಿ,

ಮದರ್ ಡೀಡ್ ಮತ್ತು ಸದರ ಸ್ವತ್ತುಗಳ ಅವರಿಗೆ ಎಲ್ಲಿಂದ ಹೇಗೆ ಬಂತು ಎಂಬ ಬಗ್ಗೆ ದಾಖಲಾತಿಗಳನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮೂಲ ದಾಖಲಾತಿ ಯಾವುದು ಎಂದರೆ ಸಾಕ್ಷಿ ಸಣ್ಣವೆಂಕಟಪ್ಪರವರಿಂದ ಜಿ ಡಿ ಚಾವ್ಡರವರಿಗೆ ಸ್ವತ್ತು ಬಂದ ಬಗ್ಗೆ ದಾಖಲೆಯಾಗಿದ್ದು ಅದನ್ನು ನಾನು ಪಡೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ನಾನು ಪರಿಶೀಲಿಸಿರುವಂತಹ ಕ್ರಯಪತ್ರಗಳಂತೆ ಜಿ ಡಿ ಚಾವ್ಡ ರವರು ಸದರಿ ಸ್ವತ್ತುಗಳನ್ನು ಖರೀದಿಸುವಾಗ ಅದು ಕೃಷಿ ಭೂಮಿ ಆಗಿತ್ತು ಎಂದರೆ ಸರಿ. ಸದರಿ ಸ್ವತ್ತುಗಳನ್ನು ಎಲ್ ಸಿ ರವೀಂದ್ರಕುಮಾರ್ ರವರು ಖರೀದಿಸುವ ಹೊತ್ತಿಗೆ ಅದು ಅನ್ಯಕ್ರಾಂತವಾಗಿತ್ತ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಅನ್ಯಕ್ರಾಂತವಾದ ಬಗ್ಗೆ ಹಾಗೂ ಆ ಬಗ್ಗೆ ಹಾಲಿ ಇರುವ ದಾಖಲೆಗಳನ್ನು ನಾನು ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

ನಿಡಿ-1 ರ ಕ್ರಯಪತ್ರದ ಎರಡನೇ ಪುಟದಲ್ಲಿ "ಉಪವಿಭಾಗಾಧಿಕಾರಿಗಳವರಿಂದ ದಿನಾಂಕ 23/08/1967 ರಂತೆ ಎ ಎಲ್ ಎನ್ ಸಂಖ್ಯೆ 22 ರಂತೆ ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಸಿ ಕಡೂರು ಪುರಸಭಾ ವ್ಯಾಪ್ತಿಗೆ ಒಳಪಡಿಸಿ ಪುರಸಭಾ ಅಸೆಸ್ಮೆಂಟ್ ನಂಬರು 791 ಎಂದು

ದಾಖಲಿಸಿದ ಸ್ವತ್ತಿನ ಪೈಕಿ ಷೆಡ್ಯೂಲಿನಲ್ಲಿ ಸಂಪೂರ್ಣವಾಗಿ ವಿವರಿಸಿರುವಂತಹ ಸ್ವತ್ತನ್ನು ಮೇಲ್ಕಂಡ ಒಂದನೇ ಪಾರ್ಟಿಯವರ ಪೈಕಿ ಎಲ್ ಸಿ ರವೀಂದ್ರಕುಮಾರ್ ರವರು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ " ಎಂದು ನಮೂದು ಇರುತ್ತದೆ ಎಂದರೆ ಸರಿ. ಜಿ ಡಿ ಚಾವ್ಡರವರು ಸದರಿ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಅದು ಕೃಷಿ ಭೂಮಿಯಾಗಿದ್ದು ಆನಂತರ ಎಲ್ ಸಿ ರವೀಂದ್ರಕುಮಾರ್ ರವರು ಅದೇ ಸ್ವತ್ತು ಭೂ ಪರಿವರ್ತನೆ ಗೊಂಡಿದ್ದರಿಂದ ಆ ಸ್ವತ್ತಿನ ಚಕ್ಕುಬಂದಿ ಬದಲಾವಣೆಯಾಗುತ್ತದೆ ಎಂದರೆ ಸರಿ. ಎಲ್ ಸಿ ರವೀಂದ್ರಕುಮಾರ್ ರವರ ಕ್ರಯಪತ್ರದಲ್ಲಿರುವಂತಹ ಚಕ್ಕುಬಂದಿಯನ್ನು ನಾನು ನೋಡಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ವಾದಿಗಳು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ಪರಿಶೀಲಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ವಾದಿಗಳು ನಿಪಿ-2 ರಂತೆ ಎಲ್ ಸಿ ರವೀಂದ್ರಕುಮಾರ್ ರವರ ಕ್ರಯಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಎರಡು ಆಸ್ತಿಗಳನ್ನು ಖರೀದಿಸಿದ ಬಗ್ಗೆ ನಮೂದು ಇದೆ ಎಂದರೆ ಸರಿ. ಸದರಿ ದಾಖಲೆಯಂತೆ ಎಲ್ ಸಿ ರವೀಂದ್ರಕುಮಾರ್ ರವರು ಅಸೆಸ್ಮೆಂಟ್ ನಂ.791 ರಲ್ಲಿ ಉತ್ತರಭಾಗದ ಪೂರ್ವ-ಪಶ್ಚಿಮ

ಮತ್ತು ಉತ್ತರಭಾಗದಲ್ಲಿರುವ 356 ಅಡಿಗಳು ದಕ್ಷಿಣೋತ್ತರ 172 ಅಡಿಗಳುಳ್ಳ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಸಣ್ಣತಿಮ್ಮಯ್ಯನವರ ಜಮೀನು, ಪಶ್ಚಿಮಕ್ಕೆ ಕಡೂರು - ಮಂಗಳೂರು ರಸ್ತೆ, ದಕ್ಷಿಣಕ್ಕೆ ಈ ಪೈಕಿ ನಾನು ಕಾಶೀವಿಶ್ವನಾಥರವರಿಗೆ ಕ್ರಯಕ್ಕೆ ಕೊಟ್ಟಿರುವ ಸ್ವತ್ತು ಮತ್ತು ಉತ್ತರಕ್ಕೆ ರತ್ನಸ್ವಾಮಿ ಮತ್ತು ಕಪಿನಿರವರ ಜಮೀನು, ಅದೇರೀತಿ ಅಸೆಸ್ಮೆಂಟ್ ನಂ.791 ರ ದಕ್ಷಿಣ ಭಾಗದ ಪೂರ್ವ-ಪಶ್ಚಿಮ ಉತ್ತರಭಾಗದಲ್ಲಿ 272 ಅಡಿಗಳು ದಕ್ಷಿಣದಲ್ಲಿ 198 ಅಡಿಗಳು ದಕ್ಷಿಣೋತ್ತರ 280 ಅಡಿಗಳುಳ್ಳ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಸಣ್ಣತಿಮ್ಮಯ್ಯರವರ ಮತ್ತು ಬೀರಪ್ಪರವರ ಜಮೀನು, ಪಶ್ಚಿಮಕ್ಕೆ ಕಡೂರು - ಮಂಗಳೂರು ರಸ್ತೆ, ದಕ್ಷಿಣಕ್ಕೆ ನಾನು ಶ್ರೀಮತಿ ಯಶೋಧಮ್ಮರವರಿಗೆ ಕ್ರಯಕ್ಕೆ ಕೊಟ್ಟಿರುವ ಸ್ವತ್ತು ಮತ್ತು ಉತ್ತರಕ್ಕೆ ಬೀರಪ್ಪರವರ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಎರಡೂ ಸ್ವತ್ತುಗಳ ಪೈಕಿ ದಕ್ಷಿಣಭಾಗದಲ್ಲಿರುವ ಸ್ವತ್ತು ಸಂಖ್ಯೆ 791 ರ ಪೈಕಿ ವಿಸ್ತೀರ್ಣ 272 + 198 /2 * 280 ಅಡಿಗಳುಳ್ಳ ಸ್ವತ್ತನ್ನು ನಾನು ಖರೀದಿಸಿರುತ್ತೇನೆ ಎಂದರೆ ಹೌದು ಎಂದು ನುಡಿಯುತ್ತಾರೆ. ಪ್ರತಿ 5 ವರ್ಷಕ್ಕೊಮ್ಮೆ ಅಸೆಸ್ಮೆಂಟ್ ಸಂಖ್ಯೆಗಳು ಬದಲಾಗುತ್ತವೆ ಎಂದರೆ ಸರಿ. ಮೇಲ್ಕಂಡ ಆಸ್ತಿಯನ್ನು ನಾನು ಖರೀದಿಸುವ ಎಷ್ಟು ದಿನಗಳ ಮೊದಲು ಮಾತುಕತೆ ಮಾಡಿದ್ದೆ ಎಂದರೆ

ಸಾಕ್ಷಿ ಡಿಸೆಂಬರ್ 2015 ರಲ್ಲಿ ಇರಬಹುದು ಎಂದು ನುಡಿಯುತ್ತಾರೆ. ನಾನು ಕೊಂಡುಕೊಂಡಿರುವಂತಹ ಸ್ವತ್ತನ್ನು ಅದರಲ್ಲಿ ಕಾಣಿಸಿರುವ ಕ್ರಯಪತ್ರದಲ್ಲಿರುವ ಎಲ್ಲಾ ಮಾರಾಟಗಾರರ ಜತೆ ಕ್ರಯದ ಮಾತುಕತೆ ಮಾಡಿರುತ್ತೇನೆ. ಆ ಸಮಯದಲ್ಲಿ ಎಲ್ ಸಿ ರವೀಂದ್ರಕುಮಾರ್ ರವರ ಕುಟುಂಬದ ಬಗ್ಗೆ ಅಂದರೆ ಅವರ ಹೆಂಡತಿ ಮತ್ತು ಮಕ್ಕಳ ಬಗ್ಗೆ ತಿಳಿದುಕೊಂಡಿದ್ದೆ ಎಂದರೆ ಸರಿ. ಸದರಿ ಎಲ್ ಸಿ ರವೀಂದ್ರಕುಮಾರ್ ರವರಿಗೆ 1 ನೇ ಪ್ರತಿವಾದಿ ವಿನಯ್ ಬಾಬುರವರು ಒಬ್ಬನೇ ಮಗ ಎಂದರೆ ಸರಿ. ಸದರಿ ಎಲ್ ಸಿ ರವೀಂದ್ರಕುಮಾರ್ ಮತ್ತು ಅವರ ಮಗ ವಿನಯ್ ಬಾಬುರವರ ಜತೆ ಮೇಲ್ಕಂಡ ಸ್ವತ್ತನ್ನು ಖರೀದಿಸುವ ಬಗ್ಗೆ ಮಾತುಕತೆ ಮಾಡುವ ಸಮಯದಲ್ಲಿ ವಾದಿಗಳಿಗೆ ಸಂಬಂಧಿಸಿದ ನಿಪಿ-1 ರ ಕರಾರುಪತ್ರದ ಬಗ್ಗೆ ಸಹ ಮಾತುಕತೆ ಮಾಡಿರುತ್ತೇವೆ ಎಂದರೆ ಸುಳ್ಳು. ನಾನು ಸುಮಾರು ಆಸ್ತಿಗಳನ್ನು ಖರೀದಿಸಿರುತ್ತೇನೆ ಎಂದರೆ ಸಾಕ್ಷಿ ಮೇಲೆ ಹೇಳಿದ ಆಸ್ತಿಯನ್ನು ಮಾತ್ರ ನಾನು ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಪೂರ್ವಪರಗಳನ್ನು ತಿಳಿದ ನಂತರ ನಾನು ಅದರ ಮಾಲೀಕರಿಂದ ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿ. ನಾನು ಮೇಲ್ಕಂಡ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಸದರಿ ಎಲ್ ಸಿ ರವೀಂದ್ರಕುಮಾರ್ ರವರ ಮಗ 1 ನೇ ಪ್ರತಿವಾದಿ ವಿನಯ್ ಬಾಬುರವರು ನಿಪಿ-2 ರ ಕ್ರಯಪತ್ರದಲ್ಲಿ ಕಾಣಿಸಿರುವ ಉತ್ತರ ದಿಕ್ಕಿನ

ಸ್ವತ್ತನ್ನು ಮಾರಾಟ ಮಾಡುವ ಬಗ್ಗೆ ಒಂದು ನೊಂದಾಯಿತ ಕ್ರಯದ ಕರಾರು ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿತ್ತಾ ಎಂದರೆ ಸಾಕ್ಷಿ ಅಂತಹ ಯಾವುದೇ ಕರಾರು ಪತ್ರವನ್ನು ಮಾಡಿಕೊಂಡಿಲ್ಲ ಅದು ಸುಳ್ಳು ಎಂದು ನುಡಿಯುತ್ತಾರೆ. ನಾನು ವಾದಿಗಳು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿ ನಿಪಿ-9 ರಂತೆ ಒಂದು ನೊಂದಾಯಿತ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡು ಅದರಲ್ಲಿ ನಿಪಿ-2 ರ ಕ್ರಯಪತ್ರದಲ್ಲಿ ಉಲ್ಲೇಖಿಸಿರುವ ಉತ್ತರಭಾಗದ ಸ್ವತ್ತಿನ ಮಾಲೀಕ ಎಂದು ಸದರಿ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಸದರಿ ಕ್ರಯದ ಕರಾರು ಪತ್ರದಲ್ಲಿ ನಮೂದಿರುವ ಸ್ವತ್ತಿನ ಸಂಖ್ಯೆ 1977/1 ಮತ್ತು 1914/1 ರ ಸ್ವತ್ತಿನ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೇಲ್ಕಂಡ ಸ್ವತ್ತು ನಾನು ಖರೀದಿಸಿರುವ ಸ್ವತ್ತಿನ ಉತ್ತರ ದಿಕ್ಕಿನಲ್ಲಿರುವ ಸ್ವತ್ತು ಎಂದರೆ ಸಾಕ್ಷಿ ಇಲ್ಲ ನಾನು ಖರೀದಿಸಿರುವ ಸ್ವತ್ತಿನ ಪೂರ್ವ ದಿಕ್ಕಿನಲ್ಲಿದೆ ಎಂದು ನುಡಿಯುತ್ತಾರೆ. ನಾನು ಖರೀದಿಸಿರುವ ಆಸ್ತಿಗಳು ಸಹ 1 ನೇ ಪ್ರತಿವಾದಿಯೇ ಮಾಲೀಕರಾಗಿದ್ದರು ಎಂದರೆ ಸರಿಯಲ್ಲ.

O.S. 41/2016 DW2

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.